ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ ಪ್ರ.ದ.ನ್ಯಾ.ದಂ., ರವರ ನ್ಯಾಯಾಲಯದಲ್ಲಿ, ತರೀಕೆರೆ.

ಸಿಸಿ ನಂಬರ್ **1012 /2023**

ಸಾಕ್ಷಿಯ ಹೆಸರು : ಕೃಷ್ಣನಾಯಕ್ ಸಿ.ಡಬ್ಲ್ಯು 1

ತಂದೆಯ ಹೆಸರು : ಖಂಡ್ಯಾನಾಯಕ್ ಪಿ.ಡಬ್ಲ್ಯು 1

ವಯಸ್ಸು : 41 ವರ್ಷ

ಉದ್ಯೋಗ : ಪಿ.ಎಸ್.ಐ ಅಜ್ಜಂಪುರ

ವಾಸ ಸ್ಥಳ : ಅಜ್ಜಂಪುರ

ದಿನಾಂಕಃ**03-09-2024** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು

ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ. ರವರಿಂದಃ-

ನಾನು 2021 ರಿಂದ ಜುಲೈ 2024 ರವರೆಗೆ ತರೀಕೆರೆಯಲ್ಲಿ ಪಿ.ಎಸ್.ಐ ಎಂದು ಕೆಲಸ ಮಾಡಿದ್ದೇನೆ. ಈ ಪ್ರಕರಣದಲ್ಲಿ ದಿಃ15-09-2022 ರಂದು ಚಾಸಾ-5 ರವರು ಸಂಜೆ 5-30 ರ ಸಮಯದಲ್ಲಿ ಬೆಟ್ಟದಹಳ್ಳಿ ಗ್ರಾಮದ ಸುತ್ತ-ಮುತ್ತ ಗಸ್ತು ಕರ್ತವ್ಯದಲ್ಲಿ ಇದ್ದಾಗ ಅವರಿಗೆ ಬಂದ ಮಾಹಿತಿ ಮೇರೆಗೆ ಬೆಟ್ಟದಹಳ್ಳಿ ಗ್ರಾಮದ ಪ್ರವೀಣ್ ಎಂಬ ವ್ಯಕ್ತಿ ತನ್ನ ಅಂಗಡಿಯ ಮುಂಭಾಗದಲ್ಲಿ ಅಕ್ರಮಾವಾಗಿ ಮದ್ಯ ಮಾರಾಟ ಮಾಡುತ್ತಿದ್ದಾರೆ ಎಂದು ಗೊತ್ತಾದ ನಂತರ ವಿಷಯವನ್ನು ನನಗೆ ತಿಳಿಸಿದ್ದು ನಾನು ಚಾಸಾ-4 ಇವರನ್ನು ಕರೆದುಕೊಂಡು ನಮ್ಮ ಇಲಾಖಾ ಬೈಕ್ ನಲ್ಲಿ ಸಂಜೆ 6-00 ಗಂಟೆಗೆ ಠಾಣೆಯಿಂದ ಹೊರೆಟೆವು. ಬೆಟ್ಟದಹಳ್ಳಿ ಗ್ರಾಮದ ದೇವಸ್ಥಾನದ ಬಳಿ ಚಾಸಾ-2 ಮತ್ತು 3 ಇವರನ್ನು ಕೂಡ ನಮ್ಮ ಜೊತೆ ಬೇರೆ ವಾಹನದಲ್ಲಿ ಕರೆದುಕೊಂಡು ಮಾಹಿತಿ ಬಂದ ಸ್ಥಳಕ್ಕೆ ಹೋದೆವು. ನಾವು ಸ್ವಲ್ಪ ದೂರನಲ್ಲಿ ನಿಂತು ನೋಡುತ್ತಿರಬೇಕಾದರೆ ಒಬ್ಬ ವ್ಯಕ್ತಿಯು ಅಂಗಡಿಯ ಪಕ್ಕದ ಖಾಲಿ ಜಾಗದಲ್ಲಿ ಒಂದು ಪ್ಲಾಸ್ಟಿಕ್ ಕವರ್ ನಲ್ಲಿ ಮದ್ಯವನ್ನು ಇಟ್ಟುಕೊಂಡು ಮಾರಾಟ ಮಾಡುತ್ತಿರುವುದು ಕಂಡುಬಂತು. ಕೂಡಲೇ ದಾಳಿ ಮಾಡಿ ಆರೋಪಿಯನ್ನು ಹಿಡಿದೆವು, ಗ್ರಾಹಕರು ಓಡಿಹೋದರು. ವ್ಯಕ್ತಿಯ ಹೆಸರನ್ನು ಕೇಳಲಾಗಿ ಆತ ಪ್ರವೀಣ್ ಎಂದು ತಿಳಿಸಿದನು ಮತ್ತು ಮದ್ಯವನ್ನು ಸಂಗ್ರಹಿಸಲು ಅಥವಾ ಮಾರಾಟ ಮಾಡಲು ಯಾವುದೇ ದಾಖಲೆಗಳನ್ನು ಆತ ಕೊಡಲಿಲ್ಲ, ಕಾರಣ ಚಾಸಾ-2 ಮತ್ತು 3 ಇವರ ಸಮಕ್ಷಮ 6-25 ರಿಂದ 7-20 ಗಂಟೆ ಮದ್ಯದಲ್ಲಿ ಪಂಚನಾಮೆಯನ್ನು ಜರುಗಿಸಿ ಮದ್ಯವನ್ನು ನನ್ನ ವಶಕ್ಕೆ ಪಡೆದುಕೊಂಡೆನು. ಆತನ ಬಳಿ ಒಟ್ಟು 90 ಎಂ.ಎಲ್ ನ 17 ಓ.ಸಿ ವಿಸ್ಕಿ ಪೌಚುಗಳು ಮತ್ತು 180 ಎಂ.ಎಲ್ ನ ಓ ಟಿ ವಿಸ್ಕಿ ಪೌಚುಗಳು ಇದ್ದವು. ನಂತರ ಆರೋಪಿ ಮತ್ತು ವಶಪಡಿಸಿಕೊಂಡ ಮದ್ಯದೊಂದಿಗೆ ಠಾಣೆಗೆ ಹಿಂತಿರುಗಿ ಸರ್ಕಾರದ ತರ್ಫೆ ಚಾಸಾ-8 ರವರಿಗೆ ಒಪ್ಪಿಸಿದ್ದೇನೆ. ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ನೋಡಿ ಗುರುತಿಸುತ್ತೇನೆ. ಮದ್ಯದ ಪೌಚುಗಳನ್ನು ಒಟ್ಟಾಗಿ ಚೀಲದೊಂದಿಗೆ ಮು.ಮಾಲು-1 ಎಂದು ಗುರುತಿಸಿಕೊಳ್ಳುತ್ತೇನೆ. ಅಮಾನತ್ತು ಪಂಚನಾಮೆಯನ್ನು ನಿ.ಪಿ-

1 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ-1(ಎ), ದೂರನ್ನು ನಿ.ಪಿ-2 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ-2(ಎ) ಎಂದು ಗುರುತಿಸಲಾಯಿತು.

<u>ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ</u>

ನಾವು ಠಾಣೆಯಿಂದ ಹೊರಟ ವಾಹನದ ಸಂಖ್ಯೆ ಹೇಳಲು ಬರುತ್ತದೆ. ಬೆಟ್ಟದಹಳ್ಳಿಯಲ್ಲಿ ಸುಮಾರು ದೇವಸ್ಥಾನಗಳು ಇವೆ ಎಂದರೆ, ಇರಬಹುದು. ರಾಷ್ಟ್ರೀಯ ಹೆದ್ದಾರಿಯ ಪಕ್ಕದಲ್ಲಿ ಇರುವ ಯಾವುದೋ ಒಂದು ದೇವಸ್ಥಾನದ ಹತ್ತಿರದಿಂದ ಪಂಚರನ್ನು ಕರೆದುಕೊಂಡು ಹೋಗಿದ್ದೇವೆ. ರಸ್ತೆಯಲ್ಲಿ ಬಹಳ ಜನಗಳು ಇದ್ದರು ಆದರೆ ನಾವು ಇಬ್ಬರನ್ನೇ ಪಂಚರನ್ನಾಗಿ ಕರೆದುಕೊಂಡು ಹೋಗಿದ್ದೇವೆ. ಆರೋಪಿಗೆ ಸೇರಿದ ಅಂಗಡಿಯ ಹೆಸರನ್ನು ನಾನು ಗಮನಿಸಲಿಲ್ಲ. ಸಾಮಾನ್ಯವಾಗಿ ಅಂಗಡಿ ಇದ್ದವರು ತಮ್ಮ ಅಂಗಡಿಯ ಒಳಗಡೆ ಇಟ್ಟುಕೊಂಡು ಕಳ್ಳತನದಿಂದ ಮಾರಾಟ ಮಾಡುತ್ತಾರೆ ಸಾರ್ವಜನಿಕ ರಸ್ತೆಯಲ್ಲಿ ಮಾರಾಟ ಮಾಡುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ನಾವು ಯಾವುದೇ ದಾಳಿಗೆ ಹೋಗಿಲ್ಲ, ಯಾವುದೇ ಮದ್ಯವನ್ನು ಆರೋಪಿಯ ಕಡೆಯಿಂದ ಅಮಾನತ್ತುಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಆರೋಪಿಗೆ ಸೇರಿದ ಯಾವುದೇ ಅಂಗಡಿ ಇರುವುದಿಲ್ಲ ಎಂದರೆ ಸರಿಯಲ್ಲ. ಆತ ಮದ ಮಾರಾಟ ಮಾಡಿಲ್ಲ ಎಂದರೆ ಸರಿಯಲ್ಲ. ಠಾಣೆಯ ಅಂಕಿ-ಸಂಖ್ಯೆಗಾಗಿ ಆರೋಪಿಯ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಲಾಗಿದೆ ಎಂದರೆ ಸರಿಯಲ್ಲ.

<u>ಮರುವಿಚಾರಣೆ :</u> ಇಲ್ಲಃ

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

ಓ ಹೇ ಕೇ ಸ ಇ ಎ ಒ

ಸಹಿ/-

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ

ಪ್ರ.ದ.ನ್ಯಾ.ದಂ., ರವರ ನ್ಯಾಯಾಲಯ, ತರೀಕೆರೆ.